# ಕಾಡುವ ಒಂಟಿತನ

ಗುಡ್... ನಮ್ಮ ಮನೆಯಲ್ಲೇ ಹೇಳಿಕೊಡ್ತಾ ಇರೋದು?

ಗೊತ್ತು ಇವರಿಗೆ, ಮನೆಯಲ್ಲಿ ಹೇಳಿಕೊಡುತ್ತಾ ಇಲ್ಲ ಅಂತ. ಸುಮ್ಮನೆ ವ್ಯಂಗ್ಯ.. ಮನೆಗೆ ಯಾಕೆ ಬಂದಿರುವಿ ಎಂಬ ಪ್ರಶ್ನೆಯ ಇನ್ನೊಂದು ರೂಪ.

ಇಲ್ಲ.. ದೊಡ್ಡ ಜೋಕ್ ಎಂಬಂತೆ ತಲೆ ಹಿಂದಕ್ಕೆ ಹಾಕಿ ನಕ್ಕ ವಿಶ್ವಾಸ್.

ನಿಮ್ಮ ಹೆಂಡ್ತಿ ಅವರ ಹತ್ತಿರ ಪುಸ್ತಕಗಳನ್ನ ಎರವಲು ಪಡೆಯಲು ಬಂದೆ. ಹೊರಟೆ. ನಿಮ್ಮನ್ನು ಈ ಮುಂಚೆ ಎಲ್ಲೋ ನೋಡಿದ್ದೀನಿ ಸರ್..

ಹೊರಟೆ ಎಂದರೂ ಹೊರಡದೆ ನಿಂತ ವಿಶ್ವಾಸ್. ನೆನಪಿಸಿಕೊಳ್ಳುವಂತೆ ಹುಬ್ಬು ಸಂಕುಚಿಸಿ ಅವನತ್ತ ನೋಡಿದರು ಇವರು.

ಬೊಂಬೆ ಮಾಡೋದು ಹೇಳಿಕೊಡೋದಲ್ಲವೇ ನೀವು. ಹೇಗೆ ಭೇಟಿ ಮಾಡಿರ್ತೀವಿ?. ಬೆಂಗಳೂರು ನಿಮ್ಮ ಊರಾ?... ನಿಮ್ಮ ತಂದೆ ಏನು ಮಾಡ್ತಾರೆ?... ಅವರ ದನಿಯಲ್ಲಿ ಉಡಾಫೆ ಎದುರಿಗೆ ನಿಂತವನನ್ನು ಕುಳಿತೇ ಮಾತಾಡಿಸುವ, ಅವರಿಗೆ ಕುಳಿತುಕೊಳ್ಳಿ ಎಂದು ಹೇಳುವ ಸೌಜನ್ಯವೂ ತೋರದ ಇವರ ಮೇಲೆ ನನಗೆ ರೇಗಿತ್ತು. ವಿಶ್ವಾಸ್ ಆದಷ್ಟು ಬೇಗನೇ ಹೊರಡಲಿ ಎಂದೆನ್ನಿಸುತ್ತಿದ್ದ ನನ್ನ ಮನಸ್ಸು ಅವನಿಗಾಗಿ, ಸ್ನೇಹಕ್ಕಾಗಿ ಹಂಬಲಿಸುವ ಅವನಿಗಾಗಿ ಮರುಗಿತು. ಮುಂದೆ ನಡೆದೆ.

ಕೂತ್ಕೊಳ್ಳಿ ವಿಶ್ವಾಸ್. ಮಾತಾಡ್ತಿರಿ.. ಕಾಫಿ ತರ್ತೀನಿ..

ಥ್ಯಾಂಕ್ಯೂ.. ಹೆಚ್ಚು ಉಪಚಾರ ಮಾಡಿಸಿಕೊಳ್ಳದೆ ಕುಳಿತ ವಿಶ್ವಾಸ್.

ನಮ್ಮ ತಂದೆ ಭೂಷಣ್ ದೇಶಪಾಂಡೆ ಅಂತ.

